**ಓ ಎಸ್ ನಂಃ 132-17**
**ಪಿ ಡಬ್ಲ್ಯೂ ಃ 1**

**ದಿಃ 16-09-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ**

21. ನಾನು ವ್ಯವಸಾಯ ಮಾಡುತ್ತೇನೆ. ನಾನು ಬಿ ಎ ಓದಿರುತ್ತೇನೆ. ಕ್ರಯದ ಕರಾರು ಪತ್ರದ ಪ್ರಕಾರ ಜಯಮ್ಮರವರು ಕ್ರಯಪತ್ರವನ್ನು ಮಾಡಿಕೊಡದೇ ಇರುವುದರಿಂದ ಈ ದಾವೆಯನ್ನು ಹೂಡಲಾಗಿದೆ. ಈ ಮೊದಲು ಹೇಳಿದಂತೆ ನಾವುಗಳು ಖರೀದಿ ಮಾತುಕತೆಗೆ 1 ನೇ ಪ್ರತಿವಾದಿಯ ಮನೆಯಲ್ಲಿ ಸೇರಿದ್ದೆವು. ದಾವಾ ಆಸ್ತಿಯನ್ನು ಮಾರಾಟ ಮಾಡುವ ಬಗ್ಗೆ ನನಗೆ ವಿಷಯವನ್ನು 1 ನೇ ಪ್ರತಿವಾದಿ ಹಾಗೂ ಅವರ ಮಕ್ಕಳು ನನ್ನ ಮನೆಯ ಕಡೆ ಬಂದು ಹೇಳಿರುತ್ತಾರೆ. ಈ ವಿಷಯವನ್ನು 2012 ರಲ್ಲಿ ಹೇಳಿದ್ದು ತಿಂಗಳು ಮತ್ತು ದಿನಾಂಕ ನೆನಪಿಲ್ಲ. ಮಾತುಕತೆಯಾದ 1 ವಾರದಲ್ಲಿ ನಿಪಿ 9 ಆಗಿರುತ್ತದೆ. ದಾವಾ ಆಸ್ತಿಯ 1 ಎಕರೆ ಬೆಲೆ 10 ಲಕ್ಷಕ್ಕಿಂತ ಹೆಚ್ಚಿಗೆ ಇತ್ತು ಎಂದರೆ ಗೊತ್ತಿಲ್ಲ. ಪ್ರತಿವಾದಿಗಳು ದಾವಾ ಆಸ್ತಿಯ ಬೆಲೆಯನ್ನು 8 1/2 ಲಕ್ಷ ಎಂದು ಹೇಳಿದ್ದು ಆದರೆ 6 ಲಕ್ಷಕ್ಕೆ ತೀರ್ಮಾನವಾಗಿರುತ್ತದೆ. ಖರೀದಿ ಬೆಲೆಯ ತೀರ್ಮಾನವನ್ನು ಸಾಕ್ಷಿದಾರರಾದ ಶ್ರೀನಿವಾಸ್ ಹಾಗೂ ದೇವರಾಜ್ ಮಾಡಿರುತ್ತಾರೆ. ಶ್ರೀನಿವಾಸ್ ರವರು ಜಾಲಮಂಗಲ ಅಂದರೆ ನನ್ನ ಊರಿನವರು ಆಗಿರುತ್ತಾರೆ. ದೇವರಾಜ್ ರವರು ಕೆಂಪಸಾಗರ ಊರಿನವರು ಆಗಿರುತ್ತಾರೆ. ಸಾಕ್ಷಿದಾರರು ದೇವರಾಜ್ ನನ್ನ ಕಡೆಯವರಾಗಿದ್ದು ಶ್ರೀನಿವಾಸ್ ರವರು ಪ್ರತಿವಾದಿಗಳ ಪರವಾಗಿ ಸಾಕ್ಷಿದಾರರು ಆಗಿದ್ದರು. ಖರೀದಿ ಮಾತುಕತೆ ಆದ ದಿನವೇ ನಿಪಿ 9 ನ್ನು ಮಾಡಲಾಗಿದೆ. ಖರೀದಿ ಮಾತುಕತೆ ಬೆಳಿಗ್ಗೆ 9.30 ಕ್ಕೆ ಮುಗಿದಿದ್ದು ನಿಪಿ 9 ಸುಮಾರು 12.30 ಗಂಟೆಗೆ ಮಾಡಿಕೊಂಡಿರುತ್ತೇವೆ. ನಾವು ನಿಪಿ 9 ನ್ನು ಬರೆಸಿಕೊಂಡ ನಂತರ ನಿಪಿ 9 ರ ನೊಂದಾವಣೆಗೆ ಸುಮಾರು 12.30 ಗಂಟೆಗೆ ಹೋಗಿರುತ್ತೇವೆ. ನಿಪಿ 9 ನೊಂದಣಿಯಾಗುವಾಗ ನಾನು, ಪ್ರತಿವಾದಿಗಳು ಹಾಗೂ ಸಾಕ್ಷಿದಾರರು ಇದ್ದೆವು. 2 ನೇ ಪ್ರತಿವಾದಿ ಶಿಕ್ಷಕರು ಆಗಿರುತ್ತಾರೆ. 3 ನೇ ಪ್ರತಿವಾದಿ ಮನೆಯಲ್ಲಿಯೇ ಇರುತ್ತಾರೆ. 1 ನೇ ಪ್ರತಿವಾದಿ ಅವರ ಮಗನ ಹತ್ತಿರ ಮಾಗಡಿಯಲ್ಲಿರುತ್ತಾರೆ. ಪ್ರತಿವಾದಿಗಳು ಎಲ್ಲರೂ ಮಾಗಡಿಯಲ್ಲಿ ವಾಸವಿರುತ್ತಾರೆ. ನಾನು ಮತ್ತು 2 ನೇ ಪ್ರತಿವಾದಿ ಸಹಪಾಠಿಗಳು ಆಗಿರುತ್ತೇವೆ ಆದ ಕಾರಣ ಪ್ರತಿವಾದಿಗಳ ಪರಿಚಯ ಮೊದಲಿನಿಂದಲೂ ಇರುತ್ತದೆ. ಆದ ಕಾರಣ ನನಗೆ ಪ್ರತಿವಾದಿಗಳ ಕುಟುಂಬದ ಎಲ್ಲಾ ಸದಸ್ಯರ ಪರಿಚಯವಿರುತ್ತದೆ. ಖರೀದಿ ಮಾತುಕತೆಗೆ ನಾವು ಸೇರಿದಾಗ ದಾವಾ ಆಸ್ತಿ ಜಯಮ್ಮರವರಿಗೆ ಸೇರಿದ್ದು ಎಂದು ಗೊತ್ತಾಗಿರುತ್ತದೆ. ಖರೀದಿ ಮಾತುಕತೆಗೆ ಪ್ರತಿವಾದಿಗಳನ್ನು

ಹೊರತುಪಡಿಸಿ ಅವರ ಉಳಿಕೆ ಕುಟುಂಬದ ಸದಸ್ಯರು ಭಾಗವಹಿಸಿರಲಿಲ್ಲ. ನಾನು ನನ್ನ ಪಾಟೀ ಸವಾಲಿನಲ್ಲಿ 5 ಜನ ಗಂಡು ಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು ಎಂದು ಹೇಳಿರುವುದಿಲ್ಲ. ನನಗೆ ಪ್ರತಿವಾದಿಗಳ ಉಳಿದ ಕುಟುಂಬದ ಸದಸ್ಯರ ಬಗ್ಗೆ ಮಾಹಿತಿ ಇಲ್ಲ. ನಾನು ಪ್ರತಿವಾದಿಗಳನ್ನು ಹೊರತುಪಡಿಸಿ ಬೇರೆ ಅವರ ಕುಟುಂಬದ ಸದಸ್ಯರನ್ನು ಖರೀದಿ ಮಾತುಕತೆಯ ಬಗ್ಗೆ ಕೇಳಿಲ್ಲ. ನಾನು 1ನೇ ಪ್ರತಿವಾದಿಗೆ ಮಕ್ಕಳ ಬಗ್ಗೆ ಕೇಳಿದ್ದು ಅದಕ್ಕೆ ಅವರು 2 ಮತ್ತು 3ನೇ ಪ್ರತಿವಾದಿಗಳು ಮಾತ್ರ ತಮ್ಮ ಮಕ್ಕಳು ಎಂದು ನನಗೆ ತಿಳಿಸಿದ್ದರು. ಈ ಬಗ್ಗೆ ನಾನು 1ನೇ ಪ್ರತಿವಾದಿಯಿಂದ ವಂಶವೃಕ್ಷವನ್ನು ಪಡೆದಿರುವುದಿಲ್ಲ. ಹೊನ್ನಯ್ಯರವರಿಗೆ ಎಷ್ಟು ಜನ ಮಕ್ಕಳು ಇದ್ದಾರೋ ಅವರೆಲ್ಲರೂ ದಾವಾ ಆಸ್ತಿಯ ಸ್ವಾಧೀನತೆ ಹೊಂದಿರುತ್ತಾರೆ ಎಂದರೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಯಾರು ಉಳುಮೆ ಮಾಡುತ್ತಿದ್ದಾರೆ ಎಂದು ನಾನು ತಿಳಿದುಕೊಂಡಿದ್ದು 1ನೇ ಪ್ರತಿವಾದಿ ದಾವಾ ಆಸ್ತಿ ತಮ್ಮದೇ ಎಂದು ಹೇಳಿದ್ದರು ಎಂದು ಹೇಳುತ್ತಾರೆ. 2ನೇ ಪ್ರತಿವಾದಿಗೆ ನಾನು ಕಷ್ಟ ಕಾಲದಲ್ಲಿ ದುಡ್ಡು ಕೊಡುತ್ತಿದ್ದೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ನನ್ನ ಸಹಪಾಠಿ ಇದ್ದು ಆದ ಕಾರಣ ತಮ್ಮ ಕಷ್ಟ ಕಾಲದಲ್ಲಿ ನನ್ನ ಕಡೆಯಿಂದ ಹಣ ಪಡೆಯುತ್ತಿದ್ದರು ಎಂದರೆ ಸರಿಯಲ್ಲ. ನನ್ನ ಮತ್ತು 2ನೇ ಪ್ರತಿವಾದಿಯ ಮಧ್ಯೆ ಹಣದ ವ್ಯವಹಾರಗಳು ನಡೆಯುತ್ತಿದ್ದವು ಎಂದರೆ ಸರಿಯಲ್ಲ. 1ನೇ ಪ್ರತಿವಾದಿಗೆ ಹಣದ ಅವಶ್ಯಕತೆ ಇದ್ದಿದ್ದರಿಂದ 2ನೇ ಪ್ರತಿವಾದಿ ನನ್ನ ಕಡೆಯಿಂದ 5 ಲಕ್ಷ ರೂ ಸಾಲ ಕೇಳಿದ್ದರು ಎಂದರೆ ಸರಿಯಲ್ಲ. ಸದರಿ ಸಾಲದ ಭದ್ರತೆಗಾಗಿ ನಾನು ಪ್ರತಿವಾದಿಗಳ ಕಡೆಯಿಂದ ನಿಪಿ 9ನ್ನು ಬರೆಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸಾಲದ ಭದ್ರತೆಗಾಗಿ ನಿಪಿ 9ನ್ನು ಬರೆದುಕೊಟ್ಟಿದ್ದು ನಾನು ಮತ್ತು ಸಾಕ್ಷಿದಾರರು ಸೇರಿ ಜಮೀನಿನ ಕ್ರಯಪತ್ರ ಎಂದು ಸುಳ್ಳು ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ.

22. ಪಂಚಾಯ್ತಿಗೆ ಮತ್ತಿಕೆರೆಯ ವೆಂಕಟೇಶ್ ಹಾಗೂ ಸಾಕ್ಷಿದಾರರಾದ ಶ್ರೀನಿವಾಸ್ ರವರು ಸೇರಿದ್ದರು. ಪಂಚಾಯ್ತಿಯಲ್ಲಿ ಪ್ರತಿವಾದಿಗಳು ಕ್ರಯಪತ್ರವನ್ನು

ಮಾಡಿಕೊಡುವುದಾಗಿ ಹೇಳಿದ್ದು ಆದರೆ ಕ್ರಯಪತ್ರ ಮಾಡಿಕೊಟ್ಟಿರುವುದಿಲ್ಲ. ಪ್ರತಿವಾದಿಗಳು ತಮಗೆ ದಾಖಲೆಗಳನ್ನು ಒದಗಿಸಿಕೊಡಲು ನಿಗದಿತ ಸಮಯದಲ್ಲಿ ಆಗುವುದಿಲ್ಲ ಎಂದು ಸಮಯ ಕೇಳಿ ಇನ್ನೊಂದು ದಾಖಲೆಯನ್ನು ಬರೆದುಕೊಟ್ಟಿರುತ್ತಾರೆ. ಈ ದಾಖಲೆಯನ್ನು ಪ್ರತಿವಾದಿಗಳು ಬರೆದುಕೊಟ್ಟಿರುತ್ತಾರೆ. ಆ ದಾಖಲೆಗೆ 3 ಜನ ಪ್ರತಿವಾದಿಗಳು ಸಹಿ ಮಾಡಿರುತ್ತಾರೆ. ಸದರಿ ದಾಖಲೆಗಳನ್ನು 2015 ಮತ್ತು 2017ರಲ್ಲಿ ಪ್ರತಿವಾದಿಗಳು ಬರೆದುಕೊಟ್ಟಿರುತ್ತಾರೆ. 2 ದಾಖಲೆಗಳನ್ನು 2 ಬಾರಿಯೂ ಬರೆದುಕೊಡಲು ಛಾಪಾ ಕಾಗದವನ್ನು ಪ್ರತಿವಾದಿಗಳೇ ತಂದಿದ್ದರು. 1ನೇ ಪ್ರತಿವಾದಿ ಹೆಬ್ಬೆಟ್ಟಿನ ಸಹಿ ಮಾಡುತ್ತಾರೆ. ನಿಪಿ 10ರಲ್ಲಿ 3ನೇ ಪ್ರತಿವಾದಿಯ ಸಹಿ ಇರುವುದಿಲ್ಲ ಎಂದರೆ ನಿಜ. ನಿಪಿ

11 ರಲ್ಲಿ 1 ನೇ ಪುಟದಲ್ಲಿ 2 ಮತ್ತು 3 ನೇ ಪ್ರತಿವಾದಿಗಳ ಸಹಿ ಇರುವುದಿಲ್ಲ ಎಂದರೆ ನಿಜ. ನಿಪಿ 11 ರಲ್ಲಿ 3 ನೇ ಪ್ರತಿವಾದಿ ಹೆಬ್ಬೆಟ್ಟಿನ ಸಹಿಯನ್ನು ಹಾಕಿರುತ್ತಾರೆ ಕಾರಣ ಅವರಿಗೆ ಆರೋಗ್ಯ ಸರಿಯಿರಲಿಲ್ಲ. 3 ನೇ ಪ್ರತಿವಾದಿ ಹೆಬ್ಬೆಟ್ಟಿನ ಸಹಿಯನ್ನು ಮಾಡುತ್ತಾರೆ. ನಿಪಿ 11 ರಲ್ಲಿ ಷರಾವನ್ನು ಬರೆಸಿಕೊಂಡವರ ಕಾಲಂನಲ್ಲಿ 3 ನೇ ಪ್ರತಿವಾದಿಯ ಸಹಿ ಇರುತ್ತದೆ. ನಾನು ಮತ್ತು ಪ್ರತಿವಾದಿಗಳು ಒಂದು ಬಾರಿ ಪಂಚಾಯ್ತಿಯನ್ನು ಮಾಡಿರುತ್ತೇವೆ. ಪ್ರತಿವಾದಿಗಳು 2 ಬಾರಿ ಸಮಯ ಮೀರಿದ್ದರಿಂದ ದಾಖಲೆಗಳನ್ನು ಬರೆದುಕೊಟ್ಟಿರುತ್ತಾರೆ. ಸದರಿ ದಾಖಲೆಗಳಿಗೆ ಒಂದು ದಾಖಲೆಗೆ ಶ್ರೀನಿವಾಸ್ ಬಿನ್ ಗಿರಿಯಪ್ಪ, ದೇವರಾಜ್ ಸಹಿ ಮಾಡಿದ್ದು 2 ನೇ ದಾಖಲೆಗೆ ಎಂ ವಿ ವೆಂಕಟೇಶ್ ಮತ್ತು ಶ್ರೀನಿವಾಸ್ ರವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ.

23. ನಾನು ಪ್ರತಿವಾದಿಗಳಿಗೆ ಸಾಲ ಕೊಟ್ಟಿದ್ದು ಅದರಂತೆ ಪ್ರತಿವಾದಿಗಳು ನನಗೆ ತಿಂಗಳು ಕೊಡುವ ಬಡ್ಡಿಯನ್ನು ನನ್ನ ಪುಸ್ತಕದಲ್ಲಿ ಬರೆದಿಟ್ಟುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿಗಳಿಗೆ ಕೊಟ್ಟ ನೋಟಿಸ್ ಗೆ ಪ್ರತಿವಾದಿಗಳು ಪ್ರತ್ಯುತ್ತರ ಕೊಟ್ಟಿದ್ದರು ಎಂದರೆ ನಿಜ. ಪ್ರತಿವಾದಿಗಳು ನನ್ನ ಕಡೆಯಿಂದ ಸಾಲ ಪಡೆದಿದ್ದಾರೆಂದು ಪ್ರತ್ಯುತ್ತರ ಕೊಟ್ಟಿರುತ್ತಾರೆ. ಈ ವಿಷಯವನ್ನು ನನ್ನ ವಾದಪತ್ರದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ನಾನು ಕೊಟ್ಟ ಸಾಲದ ಬಗ್ಗೆ ಅಸಲು ಮತ್ತು ಬಡ್ಡಿಯನ್ನು ಕೊಟ್ಟಿದ್ದು 60 ಸಾವಿರ ರೂ ಕೊಡುವುದು ಮಾತ್ರ ಬಾಕಿ ಇರುತ್ತದೆ ಎಂದರೆ ಸರಿಯಲ್ಲ.

ಪ್ರತಿವಾದಿಗಳಿಂದ ಹೆಚ್ಚಿಗೆ ಹಣ ಪಡೆಯಬೇಕೆಂದು ಮತ್ತು ದಾವಾ ಆಸ್ತಿಯನ್ನು ಕಬಳಿಸಬೇಕೆಂದು ನಾನು ಈ ಸುಳ್ಳು ದಾವೆ ಹೂಡಿದ್ದು ಪ್ರತಿವಾದಿಗಳು ಕ್ರಯಪತ್ರ ಬರೆದುಕೊಡುವ ಅಗತ್ಯತೆ ಇರುವುದಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮಾಗಡಿ.